ಎಲ್ಪಿಜಿಯೂ ಬಂದು, ಚಿಮಣಿ ದೀಪ ವಿದ್ಯುತ್ತಿಗೆ ಪರಿವರ್ತನೆಗೊಂಡು, ಅಂಚೆಯಣ್ಣನಿಗಾಗಿ ಕಾತರದಿಂದ ಕಾಯುವ ಕಾಯಕಕ್ಕೆ ಬ್ರೇಕ್ ಹಾಕಿದ ಫೋನ್, ವಾಟ್ಸ್ಯಾಪ್, ಸ್ಕೈಪ್, ಇತ್ಯಾದಿಗಳು; ಬಂಗ್ಲೆ, ಬೈಕು, ಕಾರು, ಟಿವಿ; ಜೊತೆ ಜೊತೆಗೇ ನಾವಿಬ್ಬರು, ನಮಗಿಬ್ಬರು ಅನ್ನುವುದರ ಅನುಷ್ಠಾನದಿಂದಾಗಿ ಬಹಳಷ್ಟು ಸುಧಾರಿಸಿದ ಜೀವನ ಮಟ್ಟ ಹೀಗೆ ಹಳ್ಳಿಯ ಇವತ್ತಿನ ಚಿತ್ರಣದ ನಡುವೆ ಈಗಲೂ ನನ್ನನ್ನು ಕಾಡುತ್ತಿರುವ ಆ ಕಾಲದ ದೃಶ್ಯವೊಂದರ ಬಗ್ಗೆ ಹೇಳದಿದ್ದರೆ ಆತ್ಮವಂಚನೆಯಾದೀತು...

ಸವೆದಷ್ಟೂ ಸವೆದು ಇನ್ನು ನನ್ನ ಕೈಲಿ ಏನೂ ಆಗಲ್ಲವೆಂದು ಗಂಟಿಯೊಂದು ಮೂಲೆ ಹಿಡಿದು ಮಲಗಿದಾಗ–

ಹಟ್ಟಿಯಲ್ಲಿ ಅದರ ಉಪಸ್ಥಿತಿಯೇ ಹತ್ತು ಹಲವು ಸಮಸ್ಯೆಗಳಿಗೆ ಕಾರಣವಾದಾಗ–

ಆಸುಪಾಸಿನಲ್ಲೆಲ್ಲೂ ಗೋಶಾಲೆಗಳಾಗಲೀ ಪಿಂಜರಾ ಪೋಲುಗಳಾಗಲೀ ಇಲ್ಲದಿದ್ದ ಕಾಲದಲ್ಲಿ ಭಟ್ಟರು ಶೆಟ್ಟರೆನ್ನದೇ ಹಳ್ಳಿಯ ಸಕಲೆಂಟು ಜಾತಿಯ ಸಣ್ಣ ದೊಡ್ಡ ಹಿಡುವಳಿದಾರರೆಲ್ಲರ ಮಂಡೆಯಲ್ಲಿ ಮೂಡುತ್ತಿದ್ದ ಉಪಾಯ ಒಂದೇ...

ಅದು ಹೇಗೋ ಗಂಟಿ ಸಾಯ್ಬರಿಗೆ ಸುದ್ದಿ ಮುಟ್ಟಿ... ಅವರು ಬಂದು ಗಂಟಿಯನ್ನು ಸಾಗಿಸಿಕೊಂಡು ಹೊರಟಾಗ–

'ಎಂಥ ಮಾಡುದು... ಬೆನ್ನಿಗೆ ಕಣ್ಣಿಲ್ಲೆ... ಕೊಂದ್ ಪಾಪ ತಿಂದ್‌ಪರಿಹಾರ...' ಹನಿಗಣ್ಣಾದ ಹಟ್ಟಿ ಯಜಮಾನನ ಕ್ಷೀಣ ಉಸುರಿಗೆ ಕಣ್ಣುಮೂಗು ಒರೆಸಿಕೊಳ್ಳುತ್ತ ನಿಟ್ಟುಸಿರು ಬಿಡುತ್ತಿದ್ದ ಮನೆಮಂದಿ...


## ಮೀನಾಕ್ಷಿ ಹೆಂಗವಳ್ಳಿ

ಕುಂದಾಪುರ ತಾಲ್ಲೂಕಿನ ಹೆಂಗವಳ್ಳಿ ಲೇಖಕಿಯ ಊರು. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ನೆಲೆಸಿದ್ದಾರೆ. 15–20 ಕತೆಗಳು, ಕವನ, ಲೇಖನಗಳು ವಿವಿಧ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿವೆ. ಕೆಲಕಾಲ ವಾರಪತ್ರಿಕೆಯೊಂದಕ್ಕೆ ಅಂಕಣಕಾರ್ತಿಯಾಗಿ ಬರೆದದ್ದು ಉಂಟು. ಸಾಹಿತ್ಯ, ಶಾಸ್ತ್ರೀಯ ಸಂಗೀತ, ಕಲೆ ಅವರ ಆಸಕ್ತಿಯ ಕ್ಷೇತ್ರಗಳು.